**ಕರ್ನಾಟಕ ಸರಕಾರ**

**ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಕಛೇರಿ ಐವಾನ್-ಎ-ಶಾಹಿ ರಸ್ತೆ ಕಲಬುರಗಿ**

ಸಂಖ್ಯೆ: ಸಿ8(1)ಸ.ಪ್ರೌ.ಶಾ.ಶಿ/ಜೇ.ಪ.ತ/01/2024-25 ದಿನಾಂಕ: 21.11.2025.

**ಅಧಿಸೂಚನೆ**

ವಿಷಯ: ದಿನಾಂಕ: 01/01/2025 ರಲ್ಲಿದ್ದಂತೆ ಕಲಬುರಗಿ ಆಯುಕ್ತಾಲಯ ವ್ಯಾಪ್ತಿಯ ಜಿಲ್ಲೆಗಳ ಸರ್ಕಾರಿ ಪ್ರೌಢ ಶಾಲೆಗಳ ಸಹ ಶಿಕ್ಷಕರ ಗ್ರೇಡ್-2 ಮತ್ತು ತತ್ಸಮಾನ ವೃಂದದ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ: 1) ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮವಾದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ 2017.

2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186: ಎಸ್.ಆರ್.ಎಸ್ 2018 ದಿ: 27.02.2019.

3) ಸರ್ಕಾರದ ಆದೇಶ ಸಂಖ್ಯೆ : A 186: 2.6.2 2018 ಧಿ: 15.05.2019.

4) ಈ ಕಛೇರಿ ಅಧಿಸೂಚನೆ ಪತ್ರ ಸಂಖ್ಯೆ: ಸಿ4(1) ಪ್ರೌ ಶಾ ಸ ಶಿ ಜೇ ಪ ಪ್ರ/02/2022-23 ದಿನಾಂಕ: 12/09/2022

5) ಈ ಕಛೇರಿಯಿಂದ ತಾತ್ಕಾಲಿಕ ಕರಡು ಜೇಷ್ಠತಾ ಪಟ್ಟಿ ಪ್ರಕಟಿಸಿದ ದಿನಾಂಕ: 22.01.2025

*****

ಉಲ್ಲೇಖಿತ ಆದೇಶಗಳಲ್ಲಿ ಪ್ರಸ್ತಾಪಿಸಿದ ನಿರ್ದೇಶನಗಳನ್ವಯ ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ರ ನಿಯಮಗಳನ್ವಯ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಮತ್ತು ತತ್ಸಮಾನ ಗ್ರೂಪ್ "ಎ" ಹುದ್ದೆಗಳಿಗೆ ಸ್ಥಾನಪನ್ನ ಬಡ್ತಿ ನೀಡುವ ಪ್ರಕ್ರಿಯೆಗಾಗಿ ಕಲಬುರಗಿ ಆಯುಕ್ತಾಲಯದ 07 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್-2 ಮತ್ತು ತತ್ಸಮಾನ ವೃಂದದ ಶಿಕ್ಷಕರ ಪ್ರಾರಂಭದ ಮೂಲ ವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ದಿನಾಂಕ: 22.01.2025 ರಂದು ಇಲಾಖೆಯ ವೆಬ್ ಸೈಟ್ ದಲ್ಲಿ ಪ್ರಕಟಿಸಲಾಗಿತ್ತು.

1. ಸದರಿ ಪ್ರೌಢ ಶಾಲಾ ಸಹಶಿಕ್ಷಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಭಾದಿತರಾದ ಶಿಕ್ಷಕರುಗಳಿಗೆ ದಿನಾಂಕ: 05/02/2024 ರೊಳಗಾಗಿ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವಂತೆ ತಿಳಿಸಿ, ಕಾಲಾವಕಾಶ ನೀಡಲಾಗಿತ್ತು ಮತ್ತು Google Spread Sheet ನಲ್ಲಿ ಭರ್ತಿ ಮಾಡಲಾದ ಅರ್ಹ ಆಕ್ಷೇಪಣೆಗಳನ್ನು ಪರಿಶೀಲಿಸಿ ದಿನಾಂಕ: 28/02/2025 ರಂದು ಈ ಕಛೇರಿಗೆ ಸಲ್ಲಿಸಲು ಸಂಬಂಧಿಸಿದ ಉಪನಿರ್ದೇಶಕರುಗಳಿಗೆ ತಿಳಿಸಲಾಗಿತ್ತು. ಅದರಂತೆ ಉಪನಿರ್ದೇಶಕರುಗಳ ಕಛೇರಿಯಿಂದ Google Spread Sheet ನಲ್ಲಿ ಸ್ವೀಕೃತವಾದ ಸದರಿ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅರ್ಹ ಆಕ್ಷೇಪಣೆಗಳನ್ನು ಪರಿಗಣನೆಗೆ ತೆಗೆದುಕೊಂಡು ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಗ್ರೇಡ್-2 ಮತ್ತು ತತ್ಸಮಾನ ವೃಂದದ ಸಹ ಶಿಕ್ಷಕರ ಮೂಲ ವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ದಿನಾಂಕ: 01/01/2025 ರಲ್ಲಿದ್ದಂತೆ ಅಂತಿಮಗೊಳಿಸಿ, ದಿನಾಂಕ: 21/11/2025 ರಂದು ಉಲ್ಲೇಖ (5)ರ ಈ ಕಛೇರಿ ಅಧಿಸೂಚನೆ ಪತ್ರದಲ್ಲಿ ಇಲಾಖೆಯ ವೆಬ್ ಸೈಟ್ https://cpikalaburgi.karnataka.gov.in ಅಂತಿಮ ಜೇಷ್ಠತಾ ಪಟ್ಟಿಯನ್ನು ಇಲಾಖೆಯ ವೆಬ್‌ಸೈಟ್ n ದಲ್ಲಿ ಪ್ರಕಟಿಸಲಾಗಿದೆ.

2. ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ದಿನಾಂಕ: 01.01.2014 ರಲ್ಲಿ ಇರುವಂತೆ ದಿನಾಂಕ: 05.02.2015 ರಂದು ಸ್ಥಳೀಯ ವೃಂದ ಮತ್ತು ಮೂಲ ವೃಂದ ಎಂದು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.

3. ದಿನಾಂಕ: 31.05.2015 ರಂದು ಇದ್ದಂತೆ, ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಶಿಕ್ಷಕರ ಸೇವಾ ವಿವರ ಮಾಹಿತಿ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವಿದ್ಯಾರ್ಹತೆ, ಮೆರಿಟ್ ಮಾಹಿತಿ, ಜಾತಿ ಪಂಗಡಗಳ ಷರತ್ತಿಗೆ ಒಳಪಟ್ಟಿದೆ.

4. ದಿನಾಂಕ: 29.01.2008 ರನ್ವಯ ಕಲಬುರಗಿ ವಿಭಾಗಕ್ಕೆ ಸರ್ಕಾರಿ ಪ್ರೌಢ ಶಾಲಾ ಸಹ ಶಿಕ್ಷಕರ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸೂಚಿಸಿರುತ್ತಾರೆ. ಅದರಂತೆ ಈ ದಿನಾಂಕದ ಪೂರ್ವದಲ್ಲಿ ಕಲಬುರಗಿ ವಿಭಾಗಕ್ಕೆ ವರ್ಗಾವಣೆಯಾಗಿ ಬಂದಲ್ಲಿ ಅಂತಹ ಶಿಕ್ಷಕರ ಅರ್ಹತಾ ದಿನಾಂಕವನ್ನು ಅವರು ಮೊದಲು ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸಿದೆ.

5. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ರ ನಿಯಮ 6 ಪ್ಯಾರಾ 2 ರ ಪ್ರಕಾರ ವರ್ಗಾವಣೆಯನ್ನು ನೌಕರರ ವಿನಂತಿಯ ಮೇರೆಗೆ ಮಾಡಿದ್ದಲ್ಲಿ ಅವರ ವರ್ಗಾವಣೆಯಾದ ವರ್ಗ ಅಥವಾ ಶ್ರೇಣಿಯ ಪಟ್ಟಿಯಲ್ಲಿ ಅವರನ್ನು ವರ್ಗಾವಣೆಯ ದಿನಾಂಕದಂದು ಅಥವಾ ಮುಂಚೆ ಅವರ ಸೇವೆಯ ವರ್ಗ ಅಥವಾ ಶ್ರೇಣಿಯನ್ನು ಹೊಂದಿದ ಎಲ್ಲಾ ನೌಕರರ ಕೆಳಗೆ ಅವರನ್ನು ಇಡತಕ್ಕದ್ದು ಎಂದು ಉದ್ದರಿಸುತ್ತದೆ. ಅದರಂತೆ ದಿನಾಂಕ: 29.01.2008 ರ ನಂತರ ಕಲಬುರಗಿ ವಿಭಾಗಕ್ಕೆ ವರ್ಗಾವಣೆಯಾಗಿ ಬಂದಿರುವ ಶಿಕ್ಷಕರಿಗೆ ಅರ್ಹತಾ ದಿನಾಂಕವನ್ನು ಆ ಬ್ಲಾಕ್‌ನಲ್ಲಿ ಕೊನೆಯ ದಿನಾಂಕವನ್ನು ಅರ್ಹತಾ ದಿನಾಂಕ ಎಂದು ಪರಿಗಣಿಸಿದೆ.

6. ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957ರ ನಿಯಮ 5(1)(ಎ) ರ ಪ್ರಕಾರ) ಸ್ಪರ್ಧಾತ್ಮಕ ಪರೀಕ್ಷೆಯ ಫಲಿತಾಂಶದ ಮೇಲೆ ನೇಮಕಾತಿ ಹಾಗೂ ನಿಯಮ 5(1)(ಬಿ) ರ ಪ್ರಕಾರ ನೇಮಕಾತಿಯನ್ನು ಆಯ್ಕೆಯ ಮೂಲಕ ಮಾಡಿರುವಾಗ ಜೇಷ್ಠತಾ ಕ್ರಮವು ಅರ್ಹತಾ ಕ್ರಮದಲ್ಲಿರತಕ್ಕದ್ದು .ಎಂದು ಉದ್ದರಿಸಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಸಿ.ಆ.ಇ.ಸು.ಇ 08.ಎಸ್.ಆರ್.ಎಸ್ 2019 ರ ಸುತ್ತೋಲೆ ದಿನಾಂಕ: 04.06.2019 ರ ಜೇಷ್ಠತಾ ಪಟ್ಟಿಯಲ್ಲಿ ಶಿಕ್ಷಕರ ಅರ್ಹತಾ ದಿನಾಂಕವನ್ನು ನಿಗದಿಪಡಿಸಲು ಅವಕಾಶ ಕಲ್ಪಿಸಿರುತ್ತದೆ. ಹಾಗೂ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತಾ) ನಿಯಮಗಳು 1957 ರ ನಿಯಮ 5(1)(ಎ) ರ ಪ್ರಕಾರ ನೇಮಕಾತಿಯನ್ನು ಆಯ್ಕೆಯ ಮೂಲಕ ಮಾಡಿರುವಾಗ ಆಯಾ ನೇಮಕಾತಿ ಪ್ರಾಧಿಕಾರವು ಯಾವ ಆದೇಶದ ಮೂಲಕ ಅಭ್ಯರ್ಥಿಗಳ ಅರ್ಹತಾ ಕ್ರಮದಲ್ಲಿ ಇಡಲಾಗಿದೆಯೋ ಆ ಆದೇಶದ ಮೂಲಕ ಅವರ ಜೇಷ್ಠತಾ ಕ್ರಮವನ್ನು ನಿರ್ಧರಿಸತಕ್ಕದ್ದು ಎಂದು ಉದ್ದರಿಸುತ್ತದೆ. ಪ್ರಯುಕ್ತ ನೇರ ನೇಮಕಾತಿ ಮೂಲಕ ನೇಮಕಗೊಂಡ ಶಿಕ್ಷಕರನ್ನು ಅವರ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟಿಸಿದ ದಿನಾಂಕವನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿದೆ.

7. ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯಿಂದ ಪ್ರೌಢ ಶಾಲಾ ಸಹ ಶಿಕ್ಷಕರ ಹುದ್ದೆಗೆ ಬಡ್ತಿ ಪಡೆದ ಶಿಕ್ಷಕರುಗಳ ಅರ್ಹತಾ ದಿನಾಂಕವನ್ನು ಅವರು ಗ್ರೇಡ್-2 ಹುದ್ದೆಗೆ ಹಾಜರಾದ ದಿನಾಂಕವನ್ನು ಅರ್ಹತಾ ದಿನಾಂಕ ಎಂದು ಪರಿಗಣಿಸಿದೆ.

8. ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

9. ಸದರಿ ಜೇಷ್ಠತಾ ಪಟ್ಟಿಯು ವಿಭಾಗದ ಉಪನಿರ್ದೇಶಕರಿಂದ ಸ್ವೀಕೃತಗೊಂಡ ದೃಢೀಕೃತ ಸೇವಾ ವಿವರಗಳ ಮಾಹಿತಿ ಆಧಾರದ ಮೇಲೆ ಜೇಷ್ಠತಾ ಪಟ್ಟಿ ಅಂತಿಮಗೊಳಿಸಲಾಗಿದೆ. ಒಂದು ವೇಳೆ ಕಂಡುಬಂದಲ್ಲಿ ಸಂಬಂಧಿಸಿದ ಉಪನಿರ್ದೇಶಕರೇ ನೇರ ಹೊಣೆಗಾರರಾಗಿರುತ್ತಾರೆ.

ವಿಭಾಗೀಯ ಸಹ ನಿರ್ದೇಶಕರು
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.

ಇವರಿಗೆ,

1. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರ ಸೂಕ್ತ ಕ್ರಮಕ್ಕಾಗಿ.
2. ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಸಂಬಂಧಿಸಿದ ಉಪನಿರ್ದೇಶಕರ ಮೂಲಕ ಅಗತ್ಯ ಮಾಹಿತಿಗಾಗಿ ಕಳುಹಿಸುವುದು.
3. ಈ ಕಾರ್ಯಾಲಯದ ಇ-ಆಡಳಿತ ರವರಿಗೆ ಸಾಫ್ಟ್ ಪ್ರತಿ ಕೊಡುತ್ತಾ, ಈ ಇಲಾಖೆಯ ವೆಬ್‌ಸೈಟ್ ದಲ್ಲಿ ಪ್ರಕಟಿಸಲು ತಿಳಿಸಿದೆ.

4. ಕಲಬುರಗಿ ವಿಭಾಗದ ಎಲ್ಲಾ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ(ಡಯಟ್) ಪ್ರಾಂಶುಪಾಲರುಗಳ ಸೂಕ್ತ ಕ್ರಮಕ್ಕಾಗಿ.
5. ಈ ಕಾರ್ಯಾಲಯದ ಸಿ2(1) ಶಾಖೆಗೆ ಮಾಹಿತಿಗಾಗಿ.

**ಪ್ರತಿಯನ್ನು:**

1) ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಗೌರವ ಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಅಪರ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ರವರ ಆಪ್ತ ಶಾಖೆಗೆ ಸಲ್ಲಿಸುತ್ತಾ, ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
3) ಮಾನ್ಯ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ರವರ ಆಪ್ತ ಶಾಖೆಗೆ ಸಲ್ಲಿಸುತ್ತಾ, ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
4) ಮಾನ್ಯ ಸಹ ನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ ಕಲಬುರಗಿ ರವರ ಆಪ್ತ ಶಾಖೆಗೆ ಸಲ್ಲಿಸುತ್ತಾ, ಸದರಿ ವಿಷಯವನ್ನು ಮಾನ್ಯರ ಗಮನಕ್ಕೆ ತರಲು ಕೋರಿದೆ.
5) ಕಛೇರಿ ಪ್ರತಿ.